ಮೂಡ್ನಾಕೂಡು ಚಿನ್ನಸ್ವಾಮಿ-೭೫

# ಬಹುತ್ವ ಕಥನ

ಸಂಪಾದಕ: ಸುಭಾಷ್ ರಾಜಮಾನೆ



''ಚಿನ್ನಸ್ವಾಮಿಯವರ ಕವನಗಳಲ್ಲಿ ಎಲ್ಲ ಸ್ತರಗಳವರಿಂದ ಶತಮಾನಗಳ ಕಾಲ ತುಳಿತಕ್ಕೆ ಒಳಗಾಗಿ ಸಾಮಾಜಿಕ ನೆಲೆಯೊಂದರಲ್ಲಿ ನಿಂತು, ಈ ದೇಶದ ಒಟ್ಟು ಚರಿತ್ರೆಯನ್ನು ಕುರಿತು ಎತ್ತುವ ಪ್ರಶ್ನೆಗಳು ಮಹತ್ವದವುಗಳಾಗಿವೆ. ಚರಿತ್ರೆಯ ನಿಜವಾದ ಅರಿವಿನಿಂದ ಹುಟ್ಟಿದ ನಿಮ್ಮ ಕವಿತೆಗಳಲ್ಲಿ ಶತಮಾನಗಳ ನೋವಿದೆ, ವೈಚಾರಿಕತೆಯಿದೆ; ಪ್ರಜ್ಞಾವಂತರನ್ನು ಮರುಚಿಂತನೆಗೆ ಒಳಗುಪಡಿಸುವ ಪ್ರತಿಕ್ರಿಯೆಗಳಿವೆ.''

ಜಿ.ಎಸ್. ಶಿವರುದ್ರಪ್ಪ

''ನಮ್ಮ ನಾಡಿನ ಆಳವಾದ ಮಾತಿನ ಕವಿ ಮೂಡ್ನಾಕೂಡು ಚಿನ್ನಸ್ವಾಮಿಯವರು. ಇವರ ಕಾವ್ಯಕ್ರೋಧದ ನೆಲೆಯಲ್ಲಿ ಮಾತ್ರ ನಿಲ್ಲದೆ ನಮ್ಮ ಅರಿವನ್ನು ಹಿಗ್ಗಿಸುವ ದುಃಖದ ಸಂವೇದನೆಯಾಗುತ್ತದೆ. ಇವರಿಗೆ ಸಿಟ್ಟು ಸಾಧ್ಯ; ಬೆರಗು ಸಾಧ್ಯ. ಇವರ ಮಾತು ನೇರ; ಆದರೆ ಈ ನೇರವಾದ ಮಾತಿನಲ್ಲಿ ರೂಪಕಗಳು ಅಡಗಿರುತ್ತವೆ. ಮೊದಲ ಓದಿಗೆ ಅರ್ಥವಾಗುವ ಇವರ ಸರಳತೆ ಮತ್ತೊಂದು ಓದಿನಲಿ ಗಾಢವಾದ ಅನುಭವವನ್ನು ಕೊಡುತ್ತದೆ. ಇವರು ಕನ್ನಡ ಭಾಷೆಯನ್ನು ಅದರ ಎಲ್ಲಾ ಸಂಪತ್ತಿನಲ್ಲೂ ಬಳಸಬಲ್ಲರು. ಬೌದ್ಧಧರ್ಮ ತನ್ನೆಲ್ಲ ಅರ್ಥಗಳನ್ನು ಸದ್ಯದ ಸಂಕಷ್ಟದಲ್ಲಿ ಬಿಚ್ಚಿಡುವಂತೆ ಬರೆಯುವ ಚಿನ್ನಸ್ವಾಮಿ ನಮ್ಮ ಮುಖ್ಯ ಕವಿಗಳಲ್ಲಿ ಒಬ್ಬರು.''

ಯು.ಆರ್. ಅನಂತಮೂರ್ತಿ

''ಈ ಹಿಂದೆ ನಿಮ್ಮ ಹಲವಾರು ಕವಿತೆಗಳನ್ನು ಓದಿದ್ದೇನೆ-ಅವುಗಳ ಸಂವೇದನಾಶೀಲತೆ, ಧ್ವನಿಪೂರ್ಣತೆಗಳನ್ನು ಮೆಚ್ಚಿಕೊಂಡಿದ್ದೇನೆ. 'ಬುದ್ಧ ಬೆಳದಿಂಗಳು' ಸಂಕಲನದ ಕೆಲವೊಂದು ಕವಿತೆಗಳನ್ನು ಓದಿದರೂ ಅವು ಹೊಸ ದಿಕ್ಕಿನಲ್ಲಿ ಬೆಳೆಯುತ್ತಿರುವುದು, ಸೂಕ್ಷ್ಮತೆಯನ್ನು ಸಾಧಿಸಿರುವುದು ನೋಡಿ ತುಂಬ ಸಂತೋಷವಾಯಿತು.''

ಗಿರೀಶ ಕಾರ್ನಾಡ

''ಜಗತ್ತಿನ ಎಲ್ಲ ವಸ್ತುಗಳೂ ಒಂದೇ ನೇಯ್ಗೆಯಲ್ಲಿ ಹೆಣೆಯಲ್ಪಟ್ಟಿದೆ ಎಂಬುದು ಕುವೆಂಪು ಅವರ 'ಮಲೆಗಳಲ್ಲಿ ಮದುಮಗಳು' ಕಾದಂಬರಿಯ ಮೂಲಕ್ಕೆ ಇದೆ. ಇದನ್ನೇ ಬೇಂದ್ರೆಯವರು 'ಅಪರಂಪಾರದ ಪಾರವಾರವು ಕೂಡ ಎದೆ ತೆರೆಗಳ ಹಾರುವುದು' ಎಂದಿದ್ದಾರೆ. ಚಿನ್ನಸ್ವಾಮಿಯವರ 'ಗುಡ್ಡದ ಮರೆಯಲುರಿದ ಮೋಹದ ದೀಪ' ಕತೆಯಲ್ಲೂ ಇದು ಬಂದಿದೆ.''

ಶಂಕರ ಮೊಕಾಶಿ ಪುಣೇಕರ

ಗೀತಾಂಜಲಿ ಪುಸ್ತಕ ಪ್ರಕಾಶನ
ಕಂದಾಯ ಭವನ, ೧೦೦ ಅಡಿ ರಸ್ತೆ,
ರಾಜೇಂದ್ರನಗರ, ಶಿವಮೊಗ್ಗ
ದೂ. ೯೪೪೯೮ ೮೬೩೯೦
geethanjalipusthakaprakashana@gmail.com

₹ ೫೦೦/-

# BAHUTVA KATHANA

*A Felicitation Volume on Dr. Mudnakudu Chinnaswamy, Poet & Writer*

Edited by

**Dr. Subhash Rajamane**

*Published by*

GEETHANJALI PUSTHAKA PRAKASHANA

Revenue Building, 100 Ft Road, Rajendra Nagara

Shivamogga - 577 204, Karnataka

M : 9449886390, 9916197291

Email : geethanjalipusthakaprakashana@gmail.com

First Impression : 2019

Pages : iv + xxvi + 558 + 8 page colour photos

Price : Rs. **500/-**

Paper Used : 70 gsm Maplitho, Size : Demy 1/8

Copyright : Reserved

**ಬಹುತ್ವ ಕಥನ**

ಮೂಡ್ನಾಕೂಡು ಚಿನ್ನಸ್ವಾಮಿ ೬೫

ಪ್ರಥಮ ಮುದ್ರಣ : ೨೦೧೯

ಪುಟಗಳು : iv + xxvi + ೫೫೮ + ೮ ವರ್ಣ ಛಾಯಾಚಿತ್ರ ಪುಟಗಳು

**ಬೆಲೆ : ರೂ. ೫೦೦/-**

ಮುಖಪುಟ ವಿನ್ಯಾಸ : ಸೌಮ್ಯ ಕಲ್ಯಾಣಕರ್

ಪುಟವಿನ್ಯಾಸ : ಕೆ.ಆರ್. ಹರೀಶ್

ಪುಸ್ತಕ ದೊರೆಯುವ ಸ್ಥಳ

**ಜಿ.ಬಿ.ಟಿ. ಪಬ್ಲಿಕೇಷನ್ಸ್**

ದೊಣೇಹಳ್ಳಿ ಅಂಚೆ, ಜಗಳೂರು ತಾಲ್ಲೂಕು – ೫೭೭ ೫೨೮

ದಾವಣಗೆರೆ ಜಿಲ್ಲೆ, ಮೊ : ೯೪೪೯೮೮೬೩೯೦, ೯೯೧೬೧೯೭೨೯೧

ಪ್ರಕಾಶಕರು

**ಗೀತಾಂಜಲಿ ಪುಸ್ತಕ ಪ್ರಕಾಶನ**

ನೂರಡಿ ರಸ್ತೆ, ಕಂದಾಯ ಭವನ, ರಾಜೇಂದ್ರ ನಗರ

ಶಿವಮೊಗ್ಗ – ೫೭೭ ೨೦೪

ದೂರವಾಣಿ : ೯೪೪೯೮೮೬೩೯೦

ಮುದ್ರಣ : ರೀಗಲ್ ಪ್ರಿಂಟ್ಸ್, ಬೆಂಗಳೂರು

- ಮಾನವೀಯ ಮೌಲ್ಯಗಳ ಗಣಿ: ಚಿನ್ನಸ್ವಾಮಿ ೧೮೯

  **ಧರಣೇಂದ್ರ ಕುರಕುರಿ**
- ಕವಿಹೃದಯದ ವಿಚಾರವಾದಿ ೧೯೨

  **ಬಿ.ಎಂ. ಹನೀಫ್**
- ಭಕ್ತಿ ಪಂಜರವ ಬಯಲಾಗಿಸಿದ ಕವಿ ೧೯೫

  **ಎಚ್.ಎಸ್. ಅನುಪಮಾ**
- ಕಾವ್ಯಪ್ರೇಮಿಯ ಹುಡುಕಾಟ ೧೯೯

  **ಶೂದ್ರ ಶ್ರೀನಿವಾಸ**
- ಓದು ಬರಹದ ಗೆಳೆಯ ೨೦೪

  **ಸಿ.ಪಿ. ನಾಗರಾಜ**
- ದಲಿತ ಸಾಹಿತ್ಯ ಸಂಘಟನೆಗಳ ಒಡನಾಡಿ ೨೦೭

  **ಅರ್ಜುನ ಗೊಳಸಂಗಿ**

**ಈ] ಸಂದರ್ಶನ**

- ಮೂಡ್ನಾಕೂಡು ಚಿನ್ನಸ್ವಾಮಿ ಅವರ ಸಂದರ್ಶನ ೨೧೧

  **ಸುಭಾಷ್ ರಾಜಮಾನೆ**
- ಅನುವಾದಕರಾದ ರೊವೀನಾ ಹಿಲ್ ಸಂದರ್ಶನ ೨೨೫

  **ಸಿ.ಜಿ. ಮಂಜುಳ**


## ಭಾಗ : ಎರಡು

## ವಿಶ್ವಕಾವ್ಯ : ಒಂದು ಪಕ್ಷಿನೋಟ


- ಕವಿಯಾಗಿ ಬೆರ್ಟೋಲ್ಟ್ ಬ್ರೆಷ್ಟ್ ೨೨೯

  **ಶಾ. ಬಾಲುರಾವ್**
- ರಿಲ್ಕನ ಗುಲಾಬಿ: ಒಂದು ಟಿಪ್ಪಣಿ ೨೫೫

  **ಓ.ಎಲ್. ನಾಗಭೂಷಣಸ್ವಾಮಿ**
- ಶತಮಾನದ ಕವಿ ವಿಲಿಯಂ ಬ್ಲೇಕ್ ೨೬೩

  **ಯು.ಆರ್. ಅನಂತಮೂರ್ತಿ**
- ಸೂಫೀ ಸಖ್ಯದ ಆಖ್ಯಾನ ೨೭೫

  **ಡಿ.ಆರ್. ನಾಗರಾಜ**
- ಅರಬ್ ಮಹಿಳಾ ಕಾವ್ಯ ೨೮೭

  **ಎಂ.ಆರ್. ಕಮಲ**

- ಲಲ್ಲಾ–ನಿರ್ಲಿಂಗತ್ವದೆಡೆಗೆ ಪಯಣ ೩೧೦
  **ಆರ್. ತಾರಿಣಿ ಶುಭದಾಯಿನಿ**
- ಪ್ರೇಮ: ಅದೊಂದು ದೈವೀಕ ಸಾಧ್ಯತೆ ೩೧೯
  **ಏಜಾಜ್ ಅಹಮದ್**
  **ಅನು: ಸಿರಾಜ್ ಅಹಮದ್**
- ಇಂದಿನ ಸ್ತ್ರೀವಾದಿ ಕಾವ್ಯದ ಆಯಾಮಗಳು ೩೨೮
  **ರಾಜಿ ನರಸಿಂಹನ್**
  **ಅನು: ಬಿ.ಎಸ್. ಜಯಪ್ರಕಾಶ ನಾರಾಯಣ**
- ತೊಂಬತ್ತರ ದಶಕದ ನಂತರದ ಮರಾಠಿ ಕಾವ್ಯ ೩೩೭
  **ಶ್ರೀಧರ ನಾಂದೇಡಕರ್**
  **ಅನು: ಯಡೂರ ಮಹಾಬಲ**
- ೨೧ನೇ ಶತಮಾನದ ತೆಲುಗು ಕಾವ್ಯ ೩೪೪
  **ಕೆ. ದಾಮೋದರ ರಾವ್**
  **ಅನು: ಗುರುಪ್ರಸಾದ್ ಡಿ.ಎನ್.**
- ಸಮಕಾಲೀನ ಅಸ್ಸಾಮಿ ಕಾವ್ಯ ೩೫೧
  **ಬಿಭಷ್ ಚೌಧರಿ**
  **ಅನು: ರಿಯಾಜ್ ಪಾಷ**
- ೨೧ನೇ ಶತಮಾನದ ಗುಜರಾತಿ ಕಾವ್ಯ ೩೫೮
  **ಗೋಪಿಕಾ ಜಡೇಜಾ**
  **ಅನು: ಎನ್. ದೇವರಾಜ್**
- ಸಮಕಾಲೀನ ಭಾರತೀಯ ಇಂಗ್ಲಿಷ್ ಕಾವ್ಯ ೩೬೪
  **ಅರುಂಧತಿ ಸುಬ್ರಮಣಿಯಮ್**
  **ಅನು: ರವಿಕುಮಾರ್ ಎ.**


## ಭಾಗ : ಮೂರು

## ಬೌದ್ಧಧರ್ಮ : ಒಂದು ಇಣುಕು


- ಬುದ್ಧದೇವ ೩೭೩
  **ರವೀಂದ್ರನಾಥ ಠಾಕೂರ್**
  **ಅನು: ಸ್ವಾಮಿ ಶಂಕರಾನಂದ ಸರಸ್ವತಿ**

# ಸಮಕಾಲೀನ ಅಸ್ಸಾಮಿ ಕಾವ್ಯ: ಉಲ್ಲೇಖದ ಚೌಕಟ್ಟುಗಳು

ಬಿಭಷ್ ಚೌಧರಿ
ಅನು: ರಿಯಾಝ್ ಪಾಷ

ಭಾರತೀಯ ಸಾಹಿತ್ಯಕ್ಕೆ ಸಂಬಂಧಿಸಿದಂತೆ ಇಪ್ಪತೊಂದನೇ ಶತಮಾನದ ಅಸ್ಸಾಮೀ ಕಾವ್ಯವು ಕಾವ್ಯಾತ್ಮಕ ಕೌಶಲ್ಯದ ಬರವಣಿಗೆಯ ವಿಭಿನ್ನ ಆಯಾಮಗಳನ್ನು ಹೊಂದಿದೆ. ಭಾರತೀಯ ಬೇರೆ ಭಾಷೆಗಳ ಕಾವ್ಯಗಳ ಜೊತೆ ಇದನ್ನು ಹೋಲಿಸಿಕೊಂಡಾಗ ಇದರ ಒಂದು ವಿಶೇಷವೆಂದರೆ ಇದು ಸಂವಾದಾತ್ಮಕವಾದ ನೆಲೆಗಟ್ಟಿನಲ್ಲಿ ಕಾಣಿಸಿಕೊಳ್ಳುತ್ತಿದ್ದು, ತನ್ನದೇ ಆದ ಛಾಪನ್ನು ಮೂಡಿಸುವ ರಚನೆಗಳ ಪ್ರಾಮುಖ್ಯತೆಯನ್ನು ಪಡೆದುಕೊಂಡಿದೆ. ಆದರೂ ಈ ಬಗೆಯ ಪ್ರಯೋಗ ಅಸ್ಸಾಮೀ ಸಾಹಿತ್ಯದಲ್ಲಿ ಹೊಸದಾದ್ದರಿಂದ ಒಂದಷ್ಟು ಗೊಂದಲವನ್ನೂ ಕೂಡ ಹೊಂದಿದೆ. ೧೯೮೦ರ ದಶಕದ ಅಸ್ಸಾಮಿ ಕಾವ್ಯವು 'ಅಸ್ಮಿತೆ' ಮತ್ತು 'ಧ್ವನಿ'ಯನ್ನು ಆಧರಿಸಿ ಹೆಚ್ಚು ಪ್ರಚಾರವನ್ನು ಪಡೆದುಕೊಂಡಿತು. ಏಕೆಂದರೆ ಈ ಕಾಲಘಟ್ಟದಲ್ಲಿ ಈ ಬಗೆಗಿನ ಪ್ರಶ್ನೆಗಳು ಹೆಚ್ಚು ಪ್ರಸ್ತುತವೆನಿಸಿದ್ದವು. ಹೀಗಾಗಿ ಸಮಾಜದಲ್ಲಿ ಈಗಾಗಲೇ ಪ್ರಚಲಿತ ವಿದ್ದ 'ಪ್ರಣಯ' ಮತ್ತು 'ಹಾತೊರೆಯುವಿಕೆ'ಯ ಕಲ್ಪನೆಗಳನ್ನು ನಾಶ ಮಾಡಲು ಹೊರಟಿತು. ಆದರೆ ಅದು ಅಷ್ಟೇನೂ ಸ್ಪಷ್ಟವಾದ ಬೆಳವಣಿಗೆಯಾಗಿರಲಿಲ್ಲ. ಕಳೆದ ಶತಮಾನದ ಕೊನೆಯ ಎರಡು ದಶಕಗಳಲ್ಲಿ ಕವಿತೆಯ ಮನಸ್ಸನ್ನು 'ಹಿಂಸೆ' ಯ ಪಥವು ಆಕ್ರಮಿಸಿಕೊಂಡಿದೆ ಹಾಗೂ 'ಸಹಾನುಭೂತಿ' ಯ ವಾದವು ಸಾಮಾಜಿಕ ಪರಾನುಭೂತಿಯ ದಾಖಲೆಗಳ ಮೂಲಕ ವ್ಯಕ್ತವಾಗಿ ಪ್ರತಿರೋಧದ ಸಂರಚನೆಯನ್ನು ಹೊಂದಿದೆ.